**ಭಾರತ-ಮಾಲ್ಡೀವ್ಸ್ ರಾಜತಾಂತ್ರಿಕ ಸಂಬಂಧಗಳ ಸ್ಥಾಪನೆಯ 60 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸ್ಮರಣಾರ್ಥ ಅಂಚೆಚೀಟಿಗಳ ಬಿಡುಗಡೆ (ಜುಲೈ 25, 2025)**

ಜುಲೈ 25, 2025

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಮತ್ತು ಮಾಲ್ಡೀವ್ಸ್ ಗಣರಾಜ್ಯದ ಅಧ್ಯಕ್ಷ ಗೌರವಾನ್ವಿತ ಡಾ. ಮೊಹಮ್ಮದ್ ಮುಯಿಝು, ಭಾರತ-ಮಾಲ್ಡೀವ್ಸ್ ರಾಜತಾಂತ್ರಿಕ ಸಂಬಂಧಗಳ ಸ್ಥಾಪನೆಯ 60 ನೇ ವಾರ್ಷಿಕೋತ್ಸವದ ಸ್ಮರಣಾರ್ಥ ಅಂಚೆಚೀಟಿಗಳನ್ನು ಬಿಡುಗಡೆ ಮಾಡಿದರು.

2. ಎರಡೂ ದೇಶಗಳ ನಡುವಿನ ಪ್ರಾಚೀನ ದ್ವಿಪಕ್ಷೀಯ ಸಂಬಂಧಗಳನ್ನು ಪ್ರತಿಬಿಂಬಿಸುವ ಸ್ಮರಣಾರ್ಥ ಅಂಚೆಚೀಟಿಗಳು, ಕೇರಳದ ಐತಿಹಾಸಿಕ ದೋಣಿ ತಯಾರಿಕಾ ಪ್ರದೇಶ ಬೇಪೋರ್‌ನಲ್ಲಿ ದೊಡ್ಡ ಮರ ಬಳಸಿ ಕುಶಲಕರ್ಮಿಗಳು ನಿರ್ಮಿಸಿದ ಭಾರತೀಯ ದೋಣಿ ಉರು, ಮತ್ತು ಸಾಂಪ್ರದಾಯಿಕ ಮಾಲ್ಡೀವಿಯನ್ ಮೀನುಗಾರಿಕೆ ಬೋಟ್ - ವಧು ಧೋನಿಯ ಚಿತ್ರಗಳನ್ನು ಹೊಂದಿವೆ. ಈ ದೋಣಿಗಳು ಶತಮಾನಗಳಿಂದಲೂ ಹಿಂದೂ ಮಹಾಸಾಗರ ವ್ಯಾಪಾರದ ಭಾಗವಾಗಿವೆ. ಸಾಂಪ್ರದಾಯಿಕ ಮಾಲ್ಡೀವಿಯನ್ ಮೀನುಗಾರಿಕೆ ದೋಣಿ - ವಧು ಧೋನಿ - ಇದನ್ನು ದಿಬ್ಬ ಮತ್ತು ಕರಾವಳಿ ಮೀನುಗಾರಿಕೆಗಾಗಿ ಬಳಸಲಾಗುತ್ತದೆ. ಇದು ಮಾಲ್ಡೀವ್ಸ್‌ನ ಶ್ರೀಮಂತ ಕಡಲ ಪರಂಪರೆ ಹಾಗೂ ದ್ವೀಪ ಜೀವನ ಮತ್ತು ಸಾಗರದ ನಡುವಿನ ನಿಕಟ ಸಂಬಂಧವನ್ನು ಎತ್ತಿ ತೋರಿಸುತ್ತದೆ.

3. 1965 ರಲ್ಲಿ ಸ್ವಾತಂತ್ರ್ಯ ಪಡೆದ ನಂತರ ಮಾಲ್ಡೀವ್ಸ್‌ನೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಸ್ಥಾಪಿಸಿದ ಮೊದಲ ದೇಶಗಳಲ್ಲಿ ಭಾರತವೂ ಒಂದಾಗಿದೆ. ಸ್ಮರಣಾರ್ಥ ಅಂಚೆಚೀಟಿಗಳ ಬಿಡುಗಡೆಯು ಎರಡು ದೇಶಗಳ ನಡುವಿನ ನಿಕಟ ಮತ್ತು ಐತಿಹಾಸಿಕ ಸಂಬಂಧಗಳನ್ನು ಸಂಕೇತಿಸುತ್ತದೆ.

ಮಾಲೆ

ಜುಲೈ 25, 2025